ದಿನಾಂಕಃ 21-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- 1 ರಿಂದ 3, 12 ರಿಂದ 14 ನೇ ಪ್ರತಿವಾದಿಯರ ಪರ ಶ್ರೀ ಕೆ ಸಿ ಪಿ ವಕೀಲರಿಂದ

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನನ್ನ ಉದ್ಯೋಗ ವೈದ್ಯರು ಎಂದು ಬರೆಸಿದ್ದು ಆ ವೃತ್ತಿ ಮಾಡಲು ನನ್ನ ಹತ್ತಿರ ಪರವಾನಿಗೆ ಇದೆ. ಪರವಾನಿಗೆ ಸಂಖ್ಯೆ ನನಗೆ ನೆನಪಿಲ್ಲ. ನಾನು ಸದರಿ ಪರವಾನಿಗೆಯನ್ನು 1975-76 ರಲ್ಲಿ ಆಯುರ್ವೇದ ಮತ್ತು ಯುನಾನಿ ಬೋರ್ಡ್ ಬೆಂಗಳೂರನಿಂದ ಪಡೆದಿರುತ್ತೇನೆ. ನಾನು ಹೇಳಿದಂತೆ 1975-76 ರಲ್ಲಿ ನಾನು ವೈದ್ಯಕೀಯ ವೃತ್ತಿ ಮಾಡಲು ಪರವಾನಿಗೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ವೃತ್ತಿ ಮಾಡದಿದ್ದರೂ ಸಹ ವೈದ್ಯಕೀಯ ವೃತ್ತಿ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖಾಯಂ ಆಗಿ ವೈದ್ಯಕೀಯ ವೃತ್ತಿ ಮಾಡುವುದಿಲ್ಲ.

ನನಗೆ ಈ ಕೇಸಿನ ಮಾಹಿತಿ ಇದೆ. ಈ ಕೇಸನ್ನು ಶ್ರೀ ರಾಮಕೃಷ್ಣ ಮಠ ಬೆಂಗಳೂರುರವರ ಪರವಾಗಿ ಮಠದ ಸ್ವಾಮೀಗಳು ಹಾಕಿರುತ್ತಾರೆ ಎಂದರೆ ಸರಿ. ಶ್ರೀ ರಾಮಕೃಷ್ಣ ಮಠಕ್ಕೆ ಅದೊಂದೇ ಹೆಸರು ಇದೆಯೋ ಅಥವಾ ಬೇರೆ ಹೆಸರು ಇದೆಯೋ ಎಂದು ನನಗೆ ಗೊತ್ತಿಲ್ಲ. ನಾನು ಯಾವತ್ತೂ ವಾದಿಯ ಮಠಕ್ಕೆ ಹೋಗಿರುವುದಿಲ್ಲ. ವಾದಿಯ ಮಠದ ಉಸ್ತುವಾರಿ ಯಾರು ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 1981 ರಲ್ಲಿ ವಾದಿಯ ಮಠದ ಉಸ್ತುವಾರಿ ಯಾರು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಶ್ರೀ ರಾಮಕೃಷ್ಣ ಮಠದ ಶಾಖೆ ನಮ್ಮ ಗ್ರಾಮವಾದ ಶಿಗ್ಗಾಂವ ತಾಲೂಕಾ ಪೈಕಿ ಕುನ್ನೂರನಲ್ಲಿ ಇಲ್ಲ. ವಾದಿ ಮಠದ ಪರವಾಗಿ ನಿಮ್ಮ ಗ್ರಾಮದಲ್ಲಿ ಆದ್ಯಾತ್ಮಿಕ ಚಟುವಟಿಕೆಗಳು ನಡೆಯುತ್ತಿದ್ದವೇ ಎಂಬ ಪ್ರಶ್ನೆಗೆ ಸಾಕ್ಷಿಯು ಗಿರಿಯಪ್ಪಗೌಡ ಪಾಟೀಲರವರು ಜಮೀನು ರಿ.ಸ. ಸಂಖ್ಯೆ 22/1 ರಲ್ಲಿ ಮಠದ ಪರವಾಗಿ ಆದ್ಯಾತ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದ್ದರು ಎಂದು ನುಡಿದಿದ್ದಾರೆ. ಮೊಟ್ಟ ಮೊದಲನೇ ಬಾರಿಗೆ ಗಿರಿಯಪ್ಪಗೌಡ ಪಾಟೀಲರವರು ರಿ.ಸ. ಸಂಖ್ಯೆ 22/1 ರಲ್ಲಿ ಆದ್ಯಾತ್ಮಿಕ ಕಾರ್ಯಕ್ರಮ ಯಾವಾಗ ಮಾಡಿದ್ದರು ಎಂದು ನನಗೆ ದಿನಾಂಕ, ತಿಂಗಳು ಮತ್ತು ಇಸ್ವಿಯ ಮಾಹಿತಿ ಇಲ್ಲ.  ಸಾಕ್ಷಿಯು ಸ್ವತಃ ಒಂದು ದಿನ ಗಿರಿಯಪ್ಪಗೌಡ ಪಾಟೀಲರವರು ಆ ಜಮೀನಿನಲ್ಲಿ ಆದ್ಯಾತ್ಮಿಕ ಕಾರ್ಯಕ್ರಮ ಹಮ್ಮಿಕೊಂಡಿದ್ದು ಆ ಕಾರ್ಯಕ್ರಮಕ್ಕೆ ದ.ರಾ. ಬೇಂದ್ರೆಯವರು ಬಂದಿದ್ದರು ಎಂದು ನುಡಿದಿದ್ದಾರೆ. ಆ ಕಾರ್ಯಕ್ರಮದ ದಿನಾಂಕ, ತಿಂಗಳು ಮತ್ತು ಇಸ್ವಿ ನನಗೆ ನೆನಪಿಲ್ಲ. ಆ ಕಾರ್ಯಕ್ರಮದಲ್ಲಿ ವಾದಿ ಮಠದವರು ಯಾರಾದರೂ ಹಾಜರಿದ್ದರೇ? ಎಂಬ ಪ್ರಶ್ನೆಗೆ ಸಾಕ್ಷಿಯು  ಸ್ವಾಮಿಗಳು ಇದ್ದರು ಆದರೆ ಅವರು ಯಾವ ಮಠದವರು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ.

ನನಗೆ ಬುದ್ಧಿ ಇದ್ದಂಗೆ 1975-76 ರಲ್ಲಿ ಕ್ಯಾಮರಾದಿಂದ ಫೋಟೊ ತೆಗೆಯುತ್ತಿದ್ದರು ಎಂದರೆ ಸರಿ. ನಾನು ಗಿರಿಯಪ್ಪಗೌಡ ಪಾಟೀಲರವರು ಹಮ್ಮಿಕೊಂಡಿದ್ದರು ಎಂದು ಹೇಳುವ ಕಾರ್ಯಕ್ರಮದಲ್ಲಿ ಯಾವುದೇ ಬೋರ್ಡ ಇರಲಿಲ್ಲ. ದ.ರಾ. ಬೇಂದ್ರೆರವರು ಖ್ಯಾತ ಕವಿಗಳು ಎಂದರೆ ಸರಿ. ದ.ರಾ.

ಬೇಂದ್ರೆರವರು ಆದ್ಯಾತ್ಮಿಕ ಚಿಂತಕರಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಗಿರಿಯಪ್ಪಗೌಡ ಪಾಟೀಲರವರು ದಾವಾ ಜಮೀನು ರಿ.ಸ. ಸಂಖ್ಯೆ 22/1 ರಲ್ಲಿ ಒಟ್ಟು ಎಷ್ಟು ಆದ್ಯಾತ್ಮಿಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ದ.ರಾ. ಬೇಂದ್ರೆಯವರು ಕಾರ್ಯಕ್ರಮಕ್ಕೆ ಬಂದಿದ್ದರು ಎಂದು ಹೇಳಿದ್ದು ಬಾವಿ ಪೂಜೆ ಮಾಡಿದ್ದರು. ಆ ಸಮಯದಲ್ಲಿ ನಾನು ಚಿಕ್ಕವನಿದ್ದೆ ಹಾಗೂ ಕನ್ನಡ ಶಾಲೆಗೆ ವಿದ್ಯಾಬ್ಯಾಸಕ್ಕಾಗಿ ಹೋಗುತ್ತಿದ್ದೆ. ಆ ಸಮಯದಲ್ಲಿ ನಮ್ಮ ಮುಖ್ಯೋಪಾಧ್ಯಾಯರು ಯಾರು ಇದ್ದರು ಎಂದು ನನಗೆ ನೆನಪಿಲ್ಲ.

ನಾನು ಹೇಳಿದಂತಹ ಕಾರ್ಯಕ್ರಮದಲ್ಲಿ ನಮ್ಮ ಗ್ರಾಮದ ಜನರು ಇದ್ದರು ಆದರೆ ಅವರ ಹೆಸರು ಹೇಳಲು ಆಗುವುದಿಲ್ಲ. ಕಾರ್ಯಕ್ರಮದಲ್ಲಿ ಪೋಟೊ ತೆಗೆದಿರುವುದಿಲ್ಲ. ನಾನು ಹೇಳಿದಂತಹ ಸಮಯದಲ್ಲಿ ಸಾಮಾನ್ಯವಾಗಿ ಯಾವುದೇ ಆದ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪೋಟೊ ತೆಗೆಯುತ್ತಿದ್ದರು ಎಂದರೆ ಸಾಕ್ಷಿಯು ಬೇಕಾದವರು ತೆಗೆಸುತ್ತಿದ್ದರು ಎಂದು ನುಡಿದಿದ್ದಾರೆ. ಗಿರಿಯಪ್ಪಗೌಡ ಪಾಟೀಲ ಹಾಗೂ ಅವರ ಸಂಬಂಧಿಕರು ಕಾರ್ಯಕ್ರಮದ ಪೋಟೊ ತೆಗೆದಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ಪೋಟೊ ತೆಗೆಯುವುದನ್ನು ನಾನು ನೋಡಿರುವುದಿಲ್ಲ ಎಂದು ನುಡಿದಿದ್ದಾರೆ. ನಾನು ಹೇಳಿದಂತೆ ಗಿರಿಯಪ್ಪಗೌಡ ಪಾಟೀಲರವರು ದ.ರಾ. ಬೇಂದ್ರೆಯವರನ್ನು ಕರೆಯಿಸಿ ದಾವಾ ಜಮೀನು ರಿ.ಸ. ಸಂಖ್ಯೆ 22/1 ರಲ್ಲಿ ಯಾವುದೇ ಕಾರ್ಯಕ್ರಮ ಮಾಡದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಗಿರಿಯಪ್ಪಗೌಡ ಪಾಟೀಲ ಮೃತಪಟ್ಟ ನಂತರ ಇವತ್ತಿನವರೆಗೂ ನಾನು ವಾದಿ ಮಠಕ್ಕೆ ಹೋಗಿರುವುದಿಲ್ಲ. ಗಿರಿಯಪ್ಪಗೌಡ ಪಾಟೀಲ ಮೃತಪಟ್ಟ ನಂತರ ವಾದಿ ಮಠದವರು ನಮ್ಮ ಗ್ರಾಮಕ್ಕೆ ಬಂದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ಸಮನ್ಸ ಬಂದ ನಂತರ ನನಗೆ ಈ ಪ್ರಕರಣದ ವಿಷಯ ಗೊತ್ತಾಗಿದ್ದು. ಯಾವ ದಿನಾಂಕದಂದು ಪ್ರಕರಣದ ವಿಷಯ ನನಗೆ ಗೊತ್ತಾಯಿತು ಎಂದು ನನಗೆ ನೆನಪಿಲ್ಲ. ಕಳೆದ ವರುಷ ನನಗೆ ಈ ಪ್ರಕರಣದ ವಿಷಯ ಗೊತ್ತಾಯಿತು. ನ್ಯಾಯಾಲಯದಿಂದ ಬಂದ ಸಮನ್ಸನಲ್ಲಿ ವಾದಿ ಪರ ವಕೀಲರ ಹೆಸರು ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ವಾದಿ ಪರ ವಕೀಲರಾದ ಶ್ರೀ ಎಸ್.ಆರ್. ಹೆಗಡೆರವರಿಗೆ ಮಾಹಿತಿ ಕೊಟ್ಟು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಬರೆಸಿರುತ್ತೇನೆ. ನಾನು ಸದರಿ ವಕೀಲರನ್ನು ಹಾವೇರಿಯಲ್ಲಿ ಭೇಟಿ ಮಾಡಿದ್ದೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸುವ ಒಂದು ದಿನದ ಮುಂಚೆ ವಕೀಲರನ್ನು ಭೇಟಿ ಮಾಡಿದ್ದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ತಿದ್ದುಪಡಿಗಳು ಇವೆಯೋ ಇಲ್ಲವೋ ನಾನು ಗಮನಿಸಿರುವುದಿಲ್ಲ. ಯಾವ ದಿನಾಂಕದಂದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರು ಆಗಿದೆ ಎಂದು ನನಗೆ ಲಕ್ಷ್ಯ ಇಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ವಿಷಯಗಳ ವಯಕ್ತಿಕ ಮಾಹಿತಿ ನನಗೆ ಇದೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಗಿರಿಯಪ್ಪಗೌಡ ಪಾಟೀಲರವರು ಆದ್ಯಾತ್ಮಿಕ ಚಿಂತಕರಾಗಿದ್ದರು ಎಂದು ಬರೆಸಿದ್ದೆನೆ ಎಂದರೆ ಸರಿ. ಆ ಬಗ್ಗೆ ಯಾವುದಾದರೂ ಪೋಟೊ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ತಮ್ಮ ಜೇಬಿನಲ್ಲಿದ್ದ ಒಂದು ಪೋಟೊ ತೆಗೆದು ವಕೀಲರಿಗೆ ಹಾಗೂ ನ್ಯಾಯಾಲಯಕ್ಕೆ ತೋರಿಸಿರುತ್ತಾರೆ. ಸಾಕ್ಷಿಯು ಹಾಜರುಪಡಿಸಿದ ಪೋಟೊವನ್ನು ನಿಶಾನೆ ಸಿ 1 ಎಂದು ಗುರುತಿಸಲಾಯಿತು. ನಿಶಾನೆ ಸಿ 1 ಪೋಟೊ ಗಿರಿಯಪ್ಪಗೌಡರು ನಾನು ಚಿಕ್ಕವನಿರುವಾಗ ತೆಗೆಸಿದ್ದು ಅದು ಅವರ ಮನೆಯಲ್ಲಿ ಇತ್ತು ಹಾಗೂ ಅದರ ಒಂದು ಪ್ರತಿಯನ್ನು ನಾನು ಪಡೆದುಕೊಂಡಿರುತ್ತೇನೆ. ಸುಮಾರು 4-5 ವರುಷದ ಹಿಂದೆ ನಾನು ನಿಶಾನೆ ಸಿ 1 ನ್ನು ಬಸನಗೌಡ ಪಾಟೀಲರವರ ಮನೆಯಿಂದ ಪಡೆದಿರುತ್ತೇನೆ. ನಿಶಾನೆ ಸಿ 1 ಹೊರತುಪಡಿಸಿ ನಾನು ಮತ್ತು ಗಿರಿಯಪ್ಪಗೌಡ ಪಾಟೀಲ ಕೂಡಿಕೊಂಡು ಶೃಗೇರಿಯಲ್ಲಿ ತೆಗೆಸಿಕೊಂಡ ಪೋಟೊ ಇದೆ ಆದರೆ ಅದನ್ನು ಯಾವ ವರುಷದಲ್ಲಿ ತೆಗೆಸಿಕೊಂಡಿದ್ದೇವೆ ಎಂದು ನನಗೆ ನೆನಪಿಲ್ಲ. ಬಸನಗೌಡ ಮೃತಪಟ್ಟಿದ್ದಾರೆ ಹಾಗೂ ಅವರ ಮಗ ಹನುಮಂತಗೌಡ ಇದ್ದಾರೆ. ಅವರಿಂದ ನಾನು ನಿಶಾನೆ ಸಿ 1 ಪಡೆದಿದ್ದೆನೆ. ನನ್ನ ಮತ್ತು ಗಿರಿಯಪ್ಪಗೌಡ ಪಾಟೀಲರವರ ಬಾಂದವ್ಯ ಇದ್ದಿದ್ದರಿಂದ ನಾನು ಅವರ ಪೋಟೊ ಪಡೆದುಕೊಂಡಿದ್ದೆನೆ. ನಾನು ಚಿಕ್ಕವನಿದ್ದಾಗಿನಿಂದ ನನಗೆ ಗಿರಿಯಪ್ಪಗೌಡ ಪಾಟೀಲರವರ ಬಾಂದವ್ಯ ಇತ್ತು. ನಿಶಾನೆ ಸಿ 1 ಗಿರಿಯಪ್ಪಗೌಡ ಪಾಟೀಲರವರ ನಿಜವಾದ ಪೋಟೊ ಅಲ್ಲ ಎಂದರೆ

ಸರಿಯಲ್ಲ. ನಾನು ಮತ್ತು ವಾದಿ ಮಠದವರು ಕೂಡಿಕೊಂಡು ನಿಶಾನೆ ಸಿ 1 ಪೋಟೊ ಗಣಕಯಂತ್ರದಲ್ಲಿ ಎಡಿಟ್ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಶಾನೆ ಸಿ 1 ರ ನೆಗೆಟಿವ್ ಬಸನಗೌಡರ ಮಗನಾದ ಹನುಮಂತಗೌಡರ ಕಡೆಗೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಬಸನಗೌಡರಿಗೆ ಹನುಮಂತಗೌಡ ಎಂಬ ಮಗ ಇಲ್ಲ ಎಂದರೆ ಸಾಕ್ಷಿಯು ಹನುಮಂತಗೌಡ ಬಸನಗೌಡರ ತಮ್ಮ ಎಂದು ನುಡಿದಿದ್ದಾರೆ. ನಿಶಾನೆ ಸಿ 1 ಗಿರಿಯಪ್ಪಗೌಡ ಪಾಟೀಲರವರ ನಿಜವಾದ ಪೋಟೊ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳುವ ಹಾಗೆ ಹನುಮಂತಗೌಡ ನನಗೆ ನಿಶಾನೆ ಸಿ 1 ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಗಿರಿಯಪ್ಪಗೌಡ ಪಾಟೀಲ ವಾದಿ ಮಠದ ಭಕ್ತ ಎಂದು ತೋರಿಸಲು ನನ್ನ ಹತ್ತಿರ ಯಾವುದೇ ಪೋಟೊ ಇಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಗಿರಿಯಪ್ಪಗೌಡ ಪಾಟೀಲ ವಾದಿ ಮಠದ ಪೋಟೊ ತಂದು ಜನರಿಗೆ ಕೊಡುತ್ತಿದ್ದರು ಎಂದು ನುಡಿದಿದ್ದಾರೆ. ಗಿರಿಯಪ್ಪಗೌಡ ಪಾಟೀಲರವರು ಅವರನ್ನು ಭೇಟಿ ಮಾಡಿದವರಿಗೆ ಮೂಲ ಬೆಲೆಗೆ ಪೋಟೊ ಕೊಟ್ಟು, ಪೂಜೆ ಮಾಡಿದರೆ ಜೀವನ ಚೆನ್ನಾಗಿರುತ್ತದೆ ಎಂದು ಹೇಳುತ್ತಿದ್ದರು. ಗಿರಿಯಪ್ಪಗೌಡ ಪಾಟೀಲರವರು ಆ ಪೋಟೊಗಳನ್ನು ರೂ. 2 ಅಥವಾ 5 ಕ್ಕೆ ಕೊಡುತ್ತಿದ್ದರು. ನಾನು ಗಿರಿಯಪ್ಪಗೌಡ ಪಾಟೀಲರವರಿಂದ ವಾದಿ ಮಠದ ಪೋಟೊ ಪಡೆದುಕೊಂಡಿದ್ದೆ ಆದರೆ ಅದಕ್ಕೆ ಹಣ ಕೊಟ್ಟಿರುವುದಿಲ್ಲ ಹಾಗೂ ಯಾವ ವರುಷದಲ್ಲಿ ಪಡೆದಿದ್ದೆ ಎಂದು ನನಗೆ ನೆನಪಿಲ್ಲ. ಗಿರಿಯಪ್ಪಗೌಡ ಪಾಟೀಲ ಬಹಳ ಜನರಿಗೆ ವಾದಿ ಮಠದ ಪೋಟೊ ಕೊಟ್ಟಿದ್ದಾರೆ ಆದರೆ ಪಡೆದವರ

ಹೆಸರು ನನಗೆ ಗೊತ್ತಿಲ್ಲ ಹಾಗೂ ಯಾವ ವರುಷದಲ್ಲಿ ಕೊಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ. ನಾನು ಹೇಳಿದಂತೆ ಗಿರಿಯಪ್ಪಗೌಡ ಪಾಟೀಲ ವಾದಿ ಮಠದ ಫೋಟೊ ಯಾವತ್ತೂ, ಯಾರಿಗೂ ಮಾರಾಟ ಮಾಡದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಗಿರಿಯಪ್ಪಗೌಡ ಪಾಟೀಲರವರು ಎಷ್ಟು ಬಾರಿ ವಾದಿ ಮಠಕ್ಕೆ ಹೋಗಿದ್ದರು ಹಾಗೂ ಮೊದಲನೆ ಬಾರಿ ಯಾವಾಗ ಹೋಗಿದ್ದರು ಹಾಗೂ ಎಷ್ಟು ದಿನ ಅಲ್ಲಿ ತಂಗಿದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಅವರು ಪ್ರತಿ ವರುಷ ಹೋಗುತ್ತಿರುವುದಾಗಿ ಹೇಳುತ್ತಿದ್ದರು. ಗಿರಿಯಪ್ಪಗೌಡ ಪಾಟೀಲರವರು ಪ್ರತಿ ವರುಷ ವಾದಿ ಮಠಕ್ಕೆ ಹೋಗುತ್ತಿದ್ದರು ಎಂದು ಹೇಳಿದ್ದು ಅದು ಯಾವ ತಿಂಗಳಿನಲ್ಲಿ ಎಂದು ನನಗೆ ಗೊತ್ತಿಲ್ಲ.

ದಾವಾ ಜಮೀನಿನ ರಿ.ಸ ಸಂಖ್ಯೆ 22/1 ರಲ್ಲಿ ಪ್ರಾಥನಾ ಮಂದಿರ ಇತ್ತು ಎಂದು ಹೇಳಿದ್ದು ಅದನ್ನು ಕಟ್ಟಿಸಲು ಪರವಾನಿಗೆ ಪಡೆದಿರುವುದನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ಸ್ವತಃ ಆ ಜಮೀನಿನಲ್ಲಿ ಬಾವಿ ದಂಡಿಗೆ ಒಂದು ಕೋಣೆ ಕಟ್ಟಿಸಿದ್ದರು ಎಂದು ನುಡಿದಿದ್ದಾರೆ. ಸದರಿ ಕೋಣೆಯ ವಿಸ್ತೀರ್ಣ 10-15 ಪೂಟು ಉದ್ದ ಅಗಲ ಇತ್ತು. ಅದನ್ನು ಕಟ್ಟಲು ಗಿರಿಯಪ್ಪಗೌಡ ಪಾಟೀಲರವರು ಪರವಾನಿಗೆ ಪಡೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ದಾವಾ ಜಮೀನಿನ ರಿ.ಸ ಸಂಖ್ಯೆ 22/1 ರಲ್ಲಿ ಪ್ರಾಥನಾ ಮಂದಿರ ಇರಲಿಲ್ಲ ಎಂದರೆ ಸರಿಯಲ್ಲ. ನಾನಾಗಲೀ, ಗಿರಿಯಪ್ಪಗೌಡ ಪಾಟೀಲ ಅಥವಾ ಹನುಮಂತಗೌಡ

ಪಾಟೀಲರವರಾಗಲೀ ಆ ಪ್ರಾರ್ಥನಾ ಮಂದಿರದಲ್ಲಿ ಆದ ಕಾರ್ಯಕ್ರಮ ಪೋಟೊ ತೆಗೆದಿರುವುದಿಲ್ಲ. ಸಾಕ್ಷಿಯು ಸ್ವತಃ ಆ ಸಮಯದಲ್ಲಿ ಸಾಮಾನ್ಯವಾಗಿ ಪೋಟೊ ತೆಗೆಸುತ್ತಿರಲಿಲ್ಲ ಎಂದು ನುಡಿದಿದ್ದಾರೆ.

ಪ್ರಾರ್ಥನಾ ಮಂದಿರ ನಾನು ಚಿಕ್ಕವನಿರುವಾಗ ಕನ್ನಡ ಶಾಲೆಗೆ ಹೋಗುತ್ತಿರುವಾಗ ಕಟ್ಟಿಸಿದ್ದರು. ನಾನು ಚಿಕ್ಕವನಿರುವಾಗ ಪ್ರಾರ್ಥನಾ ಮಂದಿರ ಕಟ್ಟಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಜನ್ಮ ವರುಷ 1955. ಕನ್ನಡ ಶಾಲೆ ಎಂದರೆ 7 ನೇ ತರಗತಿವರೆಗೆ ಎಂದರೆ ಸರಿ. 1966 ರಲ್ಲಿ ನನ್ನ 7 ನೇ ತರಗತಿ ವ್ಯಾಸಂಗ ಮುಗಿದಿತ್ತು ಎಂದರೆ ಸರಿ. ನಾನು ಗಿರಿಯಪ್ಪಗೌಡ ಪಾಟೀಲವರು ದಾವಾ ಜಮೀನು ರಿ.ಸ. ಸಂಖ್ಯೆ 22/1 ರಲ್ಲಿ ಕಟ್ಟಿಸಿದ ಪ್ರಾರ್ಥನಾ ಮಂದಿರಕ್ಕೆ ಹೋಗುತ್ತಿರಲಿಲ್ಲ ಆದರೆ ಅಮವಾಸೆಗೆ ಒಮ್ಮೆ ಕಾಯಿ ಒಡೆದು ಪೂಜೆ ಮಾಡಲು ಆ ಜಮೀನಿನಲ್ಲಿ ಇರುವ ಬಾವಿಗೆ ಹೋಗುತ್ತಿದ್ದೆ. ನಾನು ಆ ರೀತಿ ಪೂಜೆಗೆ ಹೋಗದಿದ್ದರೂ ಸಹ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಪ್ರಾರ್ಥನಾ ಮಂದಿರಕ್ಕೆ ಬೇರೆಯವರು ಬಂದು ಹೋಗುತ್ತಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ.

ಈಗ ದಾವಾ ಅನುಸೂಚಿ 1 ನೇ ಜಮೀನನ್ನು ಮಹದೇವಪ್ಪ ಹೊಸೂರ ವ್ಯವಸಾಯ ಮಾಡುತ್ತಿದ್ದಾರೆ ಹಾಗೂ ಅನುಸೂಚಿ 3 ನೇ ಜಮೀನನ್ನು ದೇವೆಂದ್ರಪ್ಪ ಬಾರ್ಕಿ ವ್ಯವಸಾಯ ಮಾಡುತ್ತಿದ್ದಾರೆ ಆದರೆ ಅನುಸೂಚಿ 2 ನೇ ಜಮೀನು ಯಾರ ಕಬ್ಜಾದಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಜಮೀನುಗಳು ಈಗ ಭರಮಗೌಡ ಪಾಟೀಲ, ಬಾಲ್ಕಿ ಹಾಗೂ ಜಿಗಳೂರರವರ ಕಬ್ಜಾದಲ್ಲಿ ಇವೆ ಎಂದರೆ

ಸರಿ. ಗಿರಿಯಪ್ಪಗೌಡ ಪಾಟೀಲರವರು ಮೃತಪಟ್ಟ ನಂತರ ದಾವಾ ಆಸ್ತಿಗಳಲ್ಲಿ ವಿಭಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಗಿರಿಯಪ್ಪಗೌಡ ಪಾಟೀಲ ಹಾಗೂ ಅವರ ಸಹೋದರರ ನಡುವೆ ಆದ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ, ಏಕೆಂದರೆ ಅದು ಬಹಳ ವರುಷಗಳ ಹಿಂದೆ ಆಗಿರುತ್ತದೆ. ಆ ಬಗ್ಗೆ ನಾನು ದಾಖಲೆ ನೋಡಿಲ್ಲ ಎಂದರೆ ಸರಿ.

ಗಿರಿಯಪ್ಪಗೌಡ ಪಾಟೀಲ ದಾವಾ ಆಸ್ತಿಗಳು ವಾದಿ ಮಠವಾದ ಶ್ರೀ ರಾಮಕೃಷ್ಣ ಮಠ, ಬುಲ್ ಟೆಂಪಲ್ ರಸ್ತೆ, ಬೆಂಗಳೂರುರವರಿಗೆ ಅವರ ಮರಣಾನಂತರ ಸೇರಬೇಕೆಂದು ನನ್ನ ಮುಂದೆ ಇಚ್ಛೆ ವ್ಯಕ್ತಪಡಿಸುತ್ತಿದ್ದರು. ಗಿರಿಯಪ್ಪಗೌಡ ಪಾಟೀಲ ತನ್ನ ಮನೆಯಲ್ಲಿ ಆ ಇಚ್ಛೆಯನ್ನು ಮೊದಲ ಬಾರಿ ವ್ಯಕ್ತಪಡಿಸಿದ್ದರು. ಮೊದಲನೆ ಬಾರಿ ಯಾವ ವರುಷದಲ್ಲಿ ಆ ಇಚ್ಛೆ ವ್ಯಕ್ತಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಪ್ರತಿ ವರುಷ ಆ ರೀತಿ ಹೇಳುತ್ತಿದ್ದರು. ಕೊನೆಯ ಬಾರಿ ಯಾವಾಗ ಆ ಇಚ್ಛೆ ವ್ಯಕ್ತಪಡಿಸಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಮೃತ್ಯುಪತ್ರ ಬರೆಯುವವರೆಗೆ ಎಂದು ನುಡಿದಿದ್ದಾರೆ. ಯಾವ ದಿನಾಂಕ, ತಿಂಗಳು, ವರುಷದಂದು ಗಿರಿಯಪ್ಪಗೌಡ ಪಾಟೀಲ ತಮ್ಮ ಇಚ್ಛೆಯನ್ನು ಕೊನೆಯ ಬಾರಿ ವ್ಯಕ್ತಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.